ಇನ್ನೊಂದು ಪೋರ್ಟ್‌ಗೆ ನೇರವಾಗಿ ಸಂಪರ್ಕವಿರುವಂಥ ಈ ರೈಲ್ವೆ ಮಾರ್ಗವನ್ನು ಮಾಡುವುದಕ್ಕೆ ಕೇಂದ್ರ ಸರ್ಕಾರಕ್ಕೆ ಒತ್ತಾಯ ಮಾಡಬೇಕಾಗುತ್ತದೆ ಎಂದು ಹೇಳುತ್ತಿರುವುದು. ಈಗ ಇನ್ನೂ 90 ಎಕರೆ ಭೂಮಿ ಅಕ್ವೈರ್ ಆಗಬೇಕೆಂದು ಮಾನ್ಯ ಮುಖ್ಯಮಂತ್ರಿಗಳು ಕೊಟ್ಟಿರುವ ಉತ್ತರದಲ್ಲಿದೆ. ಅದನ್ನು ಒಂದು ವಾರದಲ್ಲಿಯೋ, ಹದಿನೈದು ದಿವಸಗಳಲ್ಲಿಯೋ ಲ್ಯಾಂಡ್ ಅಕ್ವಿಸಿಷನ್ ಮಾಡಿಕೊಡಬೇಕು. ಏಕೆಂದರೆ ಈಗಾಗಲೇ ಹದಿನೈದು ವರ್ಷಗಳಾಗಿದೆ. ಲ್ಯಾಂಡ್ ಅಕ್ವಿಸಿಷನ್ ಮಾಡಿ ರೈಲ್ವೆ ಮಾರ್ಗ ಮಾಡಲು ಕೇಂದ್ರ ಸರ್ಕಾರದ ಮೇಲೆ ಒತ್ತಾಯವನ್ನು ಮಾಡಬೇಕಾಗುತ್ತದೆ. ಇದು 2014–2015 ರಲ್ಲಿ ಅಲ್ಲ, 2012–13ನೇ ಸಾಲಿನಲ್ಲಿಯೇ ಮಾಡಿಕೊಡಬೇಕಾಗುತ್ತದೆ. ಈಗಲೇ ಅವಕಾಶವಿದ್ದರೆ ಮಾಡುತ್ತಾರೆ. ಉದಾಹರಣೆಗೆ ಹೇಳುವುದಾದರೆ ಹಾಸನ – ಮೈಸೂರು ರೈಲ್ವೆ ಮಾರ್ಗದ 110 ಕಿ.ಮೀ. ಕಾಮಗಾರಿಯನ್ನು ದೇವೇಗೌಡರು ಪ್ರಧಾನ ಮಂತ್ರಿಗಳಾಗಿದ್ದಾಗ ಒಂದೇ ವರ್ಷದಲ್ಲಿ ಮಾಡಿದರು. ಅದೇ ರೀತಿ ಈ ಮಾರ್ಗವನ್ನು ಬೇಗ ಮಾಡುವುದಕ್ಕೆ ಕೇಂದ್ರ ಸರ್ಕಾರಕ್ಕೆ ಏನು ತೊಂದರೆಯಾಗಿದೆ? ರಾಜ್ಯ ಸರ್ಕಾರ ಶೇಕಡ 50 ರಷ್ಟು ಹಣವನ್ನು ಕೊಡುತ್ತದೆ. ಹೀಗಿರುವಾಗ ಈ ಮಾರ್ಗದ ಕಾಮಗಾರಿ ಮಾಡುವುದಕ್ಕೆ ಹದಿನೈದು ವರ್ಷಗಳು ಬೇಕೆ? ಆದುದರಿಂದ ಈ ಬಗ್ಗೆ ಕೇಂದ್ರ ಸರ್ಕಾರದ ಮೇಲೆ ಒತ್ತಾಯವನ್ನು ಮಾಡಬೇಕೆಂದು ಸನ್ಮಾನ್ಯ ಮುಖ್ಯಮಂತ್ರಿಗಳನ್ನು ಒತ್ತಾಯ ಮಾಡುತ್ತಿದ್ದೇನೆ.

ಮಹಾನಗರ ಪಾಲಿಕೆಯನ್ನಾಗಿ ಮಾಡುವ ಬಗ್ಗೆ

24 : (110)

ಡಾ॥ ಸಾರ್ವಭೌಮ ಸಾತಗೌಡ ಬಗಲಿ (ಇಂಡಿ)

ಶ್ರೀ ಅಪ್ಪಾಸಾಹೇಬ ಮಲ್ಲಪ್ಪ ಪಟ್ಟಣಶೆಟ್ಟಿ (ಬಿಜಾಪುರ ನಗರ) ರವರ ಪರವಾಗಿ

ಅ) ನಗರಗಳನ್ನು ಮಹಾನಗರಪಾಲಿಕೆಯನ್ನಾಗಿ ಪರಿವರ್ತಿಸಲು ಅನುಸರಿಸುವ ಮಾನದಂಡಗಳೇನು?

ಆ) ರಾಜ್ಯದಲ್ಲಿ ಯಾವ ಯಾವ ನಗರಗಳನ್ನು ಮಹಾನಗರಪಾಲಿಕೆಯನ್ನಾಗಿ ಘೋಷಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆ?

ಇ) ಬಿಜಾಪುರ ನಗರವನ್ನು ಮಹಾನಗರಪಾಲಿಕೆಯನ್ನಾಗಿ ಮೇಲ್ದರ್ಜೆಗೇರಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ?

ಈ) ಹಾಗಿದ್ದಲ್ಲಿ, ಬಿಜಾಪುರ ನಗರವನ್ನು ಮಹಾನಗರಪಾಲಿಕೆಯನ್ನಾಗಿ ಎಂದಿನಿಂದ ಘೋಷಿಸಲಾಗುವುದು ;

ಉ) ಈ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು? (ವಿವರ ನೀಡುವುದು)

ಶ್ರೀ ಎಸ್. ಸುರೇಶ್ ಕುಮಾರ್

(ನಗರಾಭಿವೃದ್ಧಿ, ಕಾನೂನು, ನ್ಯಾಯ, ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು, ಶಾಸನ ರಚನೆ ಮತ್ತು ಬೆಂಗಳೂರು ಜಲಮಂಡಳಿ ಸಚಿವರು.

ಅ) ಕರ್ನಾಟಕ ಮಹಾನಗರಪಾಲಿಕೆ ಕಾಯ್ದೆ 1976 ರ ಕಲಂ (3) ಮತ್ತು (7) ರನ್ವಯ ಈ ಕೆಳಕಂಡ ಮಾನದಂಡಗಳನ್ವಯ ಪರಿಶೀಲಿಸಬೇಕಾಗುತ್ತದೆ.

1. ಅಂತಹ ಪ್ರದೇಶದ ಜನಸಂಖ್ಯೆಯು 3 ಲಕ್ಷಗಳಿಗಿಂತ ಕಡಿಮೆ ಇರಬಾರದು.

2. ಅಂತಹ ಪ್ರದೇಶದಲ್ಲಿನ ಜನಸಂಖ್ಯೆಯ ಸಾಂದ್ರತೆಯು ಒಂದು ಚದುರ ಕಿಲೋಮೀಟರ್ ಪ್ರದೇಶಕ್ಕೆ ಮೂರು ಸಾವಿರ ನಿವಾಸಿಗಳಿಗಿಂತ ಕಡಿಮೆ ಇಲ್ಲದ ಹೊರತು

3. ಹಿಂದಿನ ನಿಕಟ ಪೂರ್ವ ಜನಗಣತಿಯಲ್ಲಿ ಅಂತಹ ಪ್ರದೇಶದಿಂದ ಸ್ಥಳೀಯ ಆಡಳಿತಕ್ಕಾಗಿ ತೆರಿಗೆ ಮತ್ತು ತೆರಿಗೆಯಲ್ಲದ ಇತರ ಸಂಪನ್ಮೂಲಗಳಿಂದ ಉತ್ಪಾದಿತವಾದ ರಾಜಸ್ವ ವಾರ್ಷಿಕ ಆರು ಕೋಟಿ ಅಥವಾ ವಾರ್ಷಿಕ ತಲಾ ಒಬ್ಬನಿಗೆ ಇನ್ನೂರು ರೂ. ಗಳ ದರದಂತೆ ಹಾಕಲಾದ ಮೊತ್ತ ಇವೆರಡರಲ್ಲಿ ಯಾವುದು ಹೆಚ್ಚೋ ಆ ಮೊತ್ತಕ್ಕಿಂತ ಕಡಿಮೆಯಿರದ ಹೊರತು;

4. ಕೃಷಿಯೇತರ ಚಟುವಟಿಕೆಗಳಲ್ಲಿ ಉದ್ಯೋಗದ ಶೇಕಡಾವಾರು ಒಬ್ಬ ಉದ್ಯೋಗದ ಶೇಕಡ ಐವತ್ತಕ್ಕಿಂತ ಕಡಿಮೆಯಿಲ್ಲದಿದ್ದ ಹೊರತು.

ಆ) ಕರ್ನಾಟಕ ರಾಜ್ಯದಲ್ಲಿ 2011 ರ ಜನಗಣತಿ ಕಾರ್ಯ ಮುಗಿದಿರುತ್ತದೆ. ಆದರೆ ಕೇಂದ್ರ ಸರ್ಕಾರದ ರಿಜಿಸ್ಟ್ರಾರ್ ಜನರಲ್ ಹಾಗೂ ಜನಗಣತಿ ಆಯುಕ್ತರು ಸ್ಥಳೀಯ ಸಂಸ್ಥೆಗಳ ಜನಗಣತಿಯ ಅಂಕಿ-ಅಂಶಗಳನ್ನು ಅಧಿಕೃತವಾಗಿ ಪ್ರಕಟಿಸಿರುವುದಿಲ್ಲ. ಅಧಿಕೃತವಾಗಿ ಪ್ರಕಟಿಸಿದ ನಂತರ ಜನಸಂಖ್ಯೆಗನುಗುಣವಾಗಿ ಬಿಜಾಪುರ ನಗರವನ್ನು ಮಹಾನಗರಪಾಲಿಕೆಯನ್ನಾಗಿ ಮೇಲ್ದರ್ಜೆಗೇರಿಸುವ ಬಗ್ಗೆ ಕರ್ನಾಟಕ ಮಹಾನಗರಪಾಲಿಕೆ ಕಾಯ್ದೆ 1976 ರ ಕಲಂ 3 ಮತ್ತು 7 ರನ್ವಯ ವಿಷಯವನ್ನು ನಿಯಮಾನುಸಾರ ಪರಿಶೀಲಿಸಲಾಗುವುದು.

ಡಾ: ಸಾರ್ವಭೌಮ ಸಾತಗೌಡ ಬಗಲಿ :- ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ಸಚಿವರು ಉತ್ತರವನ್ನೇನೋ ನೀಡಿದ್ದಾರೆ. ಆದರೆ ಬಿಜಾಪುರ ನಗರಪಾಲಿಕೆಯನ್ನು ಮಹಾನಗರ ಪಾಲಿಕೆಯನ್ನಾಗಿ ಪರಿವರ್ತಿಸಲು ಯಾವುದೇ ಖಚಿತವಾದ ಒಂದು ಅಭಿಪ್ರಾಯವನ್ನು ಮಂಡಿಸಿಲ್ಲ. ಆದುದರಿಂದ ಬಿಜಾಪುರ

ನಗರಪಾಲಿಕೆ ಮಹಾನಗರಪಾಲಿಕೆಯಾಗಲು ಬೇಕಾದ ಎಲ್ಲ ಮಾನದಂಡಗಳನ್ನು ಪೂರೈಸಿದೆ. ನಿಜವಾಗಿಯೂ ಇದು ಮಹಾನಗರಪಾಲಿಕೆಯಾಗಲು ಅರ್ಹವಾಗಿದೆ. ಆದಕಾರಣ ಸಾಧ್ಯವಾದಷ್ಟು ಬೇಗನೆ ಮಾನ್ಯ ಸಚಿವರು ಬಿಜಾಪುರ ನಗರಪಾಲಿಕೆಯನ್ನು ಮಹಾನಗರ ಪಾಲಿಕೆಯನ್ನಾಗಿ ಪರಿವರ್ತಿಸಲು ಕ್ರಮ ತೆಗೆದುಕೊಳ್ಳಬೇಕೆಂದು ನಾನು ವಿನಂತಿಸುತ್ತೇನೆ.

ಶ್ರೀ ಎಸ್. ಸುರೇಶ್‌ಕುಮಾರ್ :– ಮಾನ್ಯ ಅಧ್ಯಕ್ಷರೆ, ಮಹಾ ನಗರಪಾಲಿಕೆಗಳಾಗುವುದಕ್ಕೆ ಏನೇನು ಮಾನದಂಡಗಳಿವೆ ಎಂಬುದರ ಬಗ್ಗೆ ಸಂಪೂರ್ಣವಾಗಿ ವಿವರಣೆಯನ್ನು ಕೊಟ್ಟಿದ್ದೇವೆ. ಈಗಾಗಲೇ ಕಳೆದ ಡಿಸೆಂಬರ್‌ನಲ್ಲಿ ನಮಗೆ ಪ್ರಾಪ್ತಿಯಾಗಿರುವ ಅಂಕಿ–ಅಂಶಗಳ ಪ್ರಕಾರ, ಮಾಹಿತಿಗಳ ಪ್ರಕಾರ ರಾಜ್ಯದ ಮೂರು ನಗರಗಳು ನಗರಪಾಲಿಕೆಯಾಗುವ ಅರ್ಹತೆಗಳು ಕಾಣುತ್ತಿರುವುದು ನಮ್ಮ ಗಮನಕ್ಕೆ ಬಂದಿದೆ. ಅವುಗಳೆಂದರೆ, ತುಮಕೂರು, ಶಿವಮೊಗ್ಗ ಮತ್ತು ಬಿಜಾಪುರ. ಈ ಮೂರಕ್ಕೂ ಇರುವ ಮಾನದಂಡಗಳ ಪ್ರಕಾರ ಮಹಾನಗರಪಾಲಿಕೆಯಾಗುವ ಅರ್ಹತೆ ಗೋಚರವಾಗುತ್ತಿದೆ. ಜೂನ್ ತಿಂಗಳಲ್ಲಿ ಕೇಂದ್ರ ಸರ್ಕಾರದ ರಿಜಿಸ್ಟ್ರಾರ್ ಜನರಲ್ ಮತ್ತು ಜನಗಣತಿ ಆಯುಕ್ತರು, ಇವರಿಂದ ಆಖೈರು ಅಂಕಿ ಅಂಶಗಳು ಅಧಿಕೃತವಾಗಿ ಹೊರಬಂದಮೇಲೆ ನಾವು ಈ ಕುರಿತು ಸರ್ಕಾರ ನಿರ್ಣಯವನ್ನು ತೆಗೆದುಕೊಂಡು ನಿರ್ಣಯವನ್ನು ಪ್ರಕಟಿಸಿ ಯಾವ ಯಾವ ನಗರಗಳನ್ನು ಮಹಾನಗರಪಾಲಿಕೆಗಳನ್ನಾಗಿ ಮಾಡಬೇಕು ಎಂಬುದನ್ನು ಮಾಡುತ್ತೇವೆ.

ವೃದ್ಧಾಪ್ಯ ವೇತನ, ಅಂಗವಿಕಲರ ವೇತನ, ವಿಧವಾ ವೇತನ, ಮತ್ತು ಸಂಧ್ಯಾ ಸುರಕ್ಷಾ ಪಿಂಚಣಿ ಯೋಜನೆಗಳನ್ನು ಪ್ರಾರಂಭಿಸುವುದು.

25 (148)

ಶ್ರೀ ನರೇಂದ್ರ ಬಾಬು ನೆ.ಲ. (ಮಹಾಲಕ್ಷ್ಮಿ ಲೇಔಟ್) ವಿಧಾನಸಭೆ ಸದಸ್ಯರು

ಅ) ವೃದ್ಧಾಪ್ಯ ವೇತನ, ಅಂಗವಿಕಲರ ವೇತನ, ವಿಧವಾ ವೇತನ, ಮತ್ತು ಸಂಧ್ಯಾ ಸುರಕ್ಷಾ ಪಿಂಚಣಿ ಯೋಜನೆಗಳನ್ನು ಮತ್ತೆ ಪ್ರಾರಂಭಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಆ) ಹಾಗಿದ್ದಲ್ಲಿ, ಎಂದಿನಿಂದ ಪ್ರಾರಂಭಿಸಲಾಗುವುದು;

ಇ) ಈಗಾಗಲೇ ಮಂಜೂರಾಗಿರುವವರಿಗೆ ಸರಿಯಾಗಿ ಕಾಲಕಾಲಕ್ಕೆ ಪಿಂಚಣಿ ದೊರೆಯದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಪಿಂಚಣಿ ನೀಡಲು ವಿಳಂಬವಾಗುತ್ತಿರುವುದಕ್ಕೆ ಕಾರಣವೇನು;

ಉ) ಈ ವಿಳಂಬವನ್ನು ತಪ್ಪಿಸಲು ಸರ್ಕಾರ ಕ್ರಮಕೈಗೊಳ್ಳುವುದೇ?